ಗೌರಜ್ಜಿಯ ಮನೆಯ ಬಾಗಿಲಲ್ಲಿ ಭರ್ಜರಿನಾಮ ಧರಿಸಿದ್ದ ಒಬ್ಬ ದಡಿಯ ಬಂದು ನಿಂತು ಕೈಯಲ್ಲಿದ್ದ ಹುಂಡಿಯನ್ನು ಗಲಗಲ ಎನಿಸಿದ.

ಏನಪ್ಪಾ ಅದು? ಗೌರಜ್ಜಿ ಕೇಳಿದಳು, ವೆಂಕಟೇಶ್ವರನ ಹುಂಡಿ ಅಜ್ಜಿ ಕೈಲಾದಷ್ಟು ಹಾಕಿ.

ಊರೆಲ್ಲ ತಿರುಗಿ ಆದ ಮೇಲೆ ಆ ಹುಂಡಿ ತಂದು ನನ್ನ ಕೈಗೆಕೊಡು. ನನಗೆ ವಯಸ್ಸಾಗಿದೆ, ನಾನೇ ಮೊದಲು ಅವನ ಹತ್ರ ಹೋಗೋದು. ನಾನೇ ಕೊಡ್ತೀನಿ.

***

ಪ್ರಸಿದ್ಧ ಸರ್ಜನ್ ಡಾ. ಮಾರ್ತಾಂಡ ಹರಳಕಟ್ಟೆಯವರ ಹೆಂಡತಿ ಕೋಪದಿಂದ 'ನೋಡಿ, ನೀವು ಏನು ಮಾಡ್ತೀರೋ ಗೊತ್ತಿಲ್ಲ, ಇನ್ನು ಒಂದು ವಾರದೊಳಗೆ ನನಗೆ ನೆಕ್ಲೇಸ್ ಬೇಕೇ ಬೇಕು' ಎಂದು ಹೇಳಿದಳು.

ಆಯ್ತು ಬಿಡೇ, ರಘುನಾಯಕ್‌ರ ಹೊಟ್ಟೆ ನೋವಿನ ಸಮಸ್ಯೆಯನ್ನು ತುರ್ತು ಹರ್ನಿಯಾ ಆಪರೇಷನ್ ಅಂತ ಮಾರ್ಪಡಿಸಿಬಿಡ್ತೀನಿ.

***

ಸಂಬಳದ ಹಣವನ್ನೆಲ್ಲ ರೇಸ್‌ನಲ್ಲಿ ಕಳೆದುಕೊಂಡು ಮನೆಗೆ ಬಂದ ಮಂಗೇಶ ಪತ್ನಿಗೆ ರಮಿಸುತ್ತಾ 'ಚಿನ್ನಾ, ಈ ಬಾರಿ ಹಣದ ಬದಲಾಗಿ ನಿನಗೆ ಕಂತು ಕಂತಾಗಿ 500 ಸಿಹಿಮುತ್ತು ನೀಡಲೇ?' ಎಂದು ಕೇಳಿದ.

ಚಿನ್ನಾಳಿಗೆ ಅರ್ಥವಾಗಿತ್ತು. ಅದಕ್ಕವಳು 'ಆಯ್ತು ಬಿಡಿ, ಹಾಲಿನವನು, ತರಕಾರಿಯವನು, ದಿನಸಿಯವನು ಎಲ್ಲರಿಗೂ ನೀವು ಕೊಟ್ಟದ್ದನ್ನೇ ಕೊಟ್ಟು ಸಾಲ ತೀರಿಸ್ತೀನಿ...' ಎಂದಳು.

***

ಪತ್ನಿ ಮಾಡಿದ ಉರಿಗಾರದ ಸಾಂಬಾರ್ ತಿಂದು ಕಣ್ಣೀರು ಸುರಿಸುತ್ತಿದ್ದ ಪತಿರಾಯ.



ಗಣೇಶ್

ರಾಮ್‌ಜಿಗೆ ಫೋನ್ ಮಾಡಿ ಅಶೋಕ್ 'ನನ್ನ ಜೊತೆ ಊಟ ಮಾಡೋಕೆ ನಿನಗೆ ಇಷ್ಟ ಇದೆಯಾ?' ಎಂದು ಕೇಳಿದ.

ಒಂದು ಊಟ ಸಿಕ್ಕಿತೆಂದು ಖುಷಿಯಿಂದ ರಾಮ್‌ಜಿ 'ಏಕಿಲ್ಲ. ನಾನು ರೆಡಿ, ಹಾಗಾದರೆ ನಿನ್ನ ಹೆಂಡತಿಗೆ ಹೇಳಿ ಪಲಾವ್, ಜಾಮೂನ್, ರೊಟ್ಟಿ, ಕಾಳಿನ ಪಲ್ಯ ಮಾಡಿಸು ರಾತ್ರಿ ಊಟಕ್ಕೆ ಬರ್ತೀನಿ' ಎಂದು ಉತ್ತರಿಸಿದ.

ಪತ್ನಿ: ಏಕೆ, ಕಣ್ಣಲ್ಲಿ ನೀರು? ಸಾಂಬಾರ್ ಸರಿಯಿಲ್ಲವೇ?

ಪತಿ: ತುಂಬಾ ಚೆನ್ನಾಗಿದೆ, ಖುಷಿಯಿಂದ ಕಣ್ಣಲ್ಲಿ ಆನಂದಭಾಷ್ಪ.

ಪತ್ನಿ: ಹಾಗಿದ್ದರೆ ಇನ್ನೂ ಸ್ವಲ್ಪ ಹಾಕಲೆ?

ಪತಿ: ಬೇಡಬೇಡ, ಖುಷಿ ಜಾಸ್ತಿ ಆದರೆ ಹೃದಯಾಘಾತವಾದೀತು.

***

ನೀವು ಸ್ವರ್ಗಕ್ಕೆ ಹೋಗುವಿರೋ? ನರಕಕ್ಕೋ? ಯಮಧರ್ಮ ಪ್ರಶ್ನಿಸಿದ.

ನನ್ನ ಪತ್ನಿ ಎಲ್ಲಿದ್ದಾಳೆ?

ಸ್ವರ್ಗದಲ್ಲಿ...

ಹಾಗಾದರೆ ನನಗೆ ನರಕವೇ ಇರಲಿ.

***

ಡಾಕ್ಟರರೇ, ಆ ಕೋಟ್ಯಧೀಶ ಹೇಮಂತ್ ಜೇವರಗಿಯವರ ಮಗನಿಗೆ ಚಿಕಿತ್ಸೆ ಕೊಡುವುದರಿಂದ ನಿಮಗೆ ತುಂಬಾ ಫೀಸ್ ಸಿಕ್ಕಿರಬೇಕಲ್ಲ?

ಹೌದು, ಇದೆಲ್ಲ ನಿಮಗ್ಯಾಕೆ?

ನನ್ನ ಕಮಿಷನ್ ಬಗ್ಗೆಯೂ ನೆನಪಿರಲಿ ಅವನಿಗೆ ಕಟ್ಟಿಗೆಯಿಂದ ಬಾರಿಸಿದ್ದು ನನ್ನ ಮಗ!

***

ವಕೀಲ: ನಾನು ಸತ್ತ ಮೇಲೆ ನನ್ನ ಎಲ್ಲಾ ಆಸ್ತಿಯನ್ನು ಹುಚ್ಚರಿಗೆ ಹಂಚಬೇಕು ಅಂತಿದೀನಿ.

ಗೆಳೆಯ: ಅದೇನು ಹಾಗೆ?

ವಕೀಲ: ನಾನು ಈ ಪಾಟಿ ಆಸ್ತಿ ಮಾಡಿರೋದು ಅವರಿಂದಲೇ ತಾನೇ.

ಸಂಗ್ರಹ: ಕೆ.ಆದಿತ್ಯ ಹೆಬ್ಬಾರ್, ಹರಪನಹಳ್ಳಿ

ಒಮ್ಮೆ ಮರಿಗುಂಡ ಶಾಲೆಗೆ ಕತ್ತೆಯೊಂದನ್ನು ಕರೆದೊಯ್ದ.

ಟೀಚರ್: ಇದೇನು ಕರೆತಂದಿರುವೆ?

ಮರಿಗುಂಡ: ನಾನು ದೊಡ್ಡ ದೊಡ್ಡ ಕತ್ತೆಗಳನ್ನೆಲ್ಲಾ ಮನುಷ್ಯರನ್ನಾಗಿಸಿದ್ದೇನೆಂದು ನೀವೇ ಹೇಳುತ್ತಿದ್ದಿರಲ್ಲ ಮೇಡಂ.ಆದ್ದರಿಂದ ಒಳ್ಳೆ ಬುದ್ಧಿಯಿಂದ ಯೋಚಿಸಿ ಇದಕ್ಕೂ ಆ ಅವಕಾಶ ಸಿಗಲೆಂದು ಕರೆತಂದೆ!

***

ಸಾಮಾನ್ಯ ಪ್ರಜೆ ಗುಂಡನ ಅನಿಸಿಕೆ, 'ಈ ಕೊರೊನಾ ಕೂಡಾ ಸರ್ಕಾರಿ ಫಂಡ್ ತರಹವೇ ಇದ್ದಿದ್ದರೆ ತುಂಬಾ ಚೆನ್ನಾಗಿತ್ತು. ಸಾಮಾನ್ಯ ಪ್ರಜೆಗಳಿಗೆ ಅದು ತಲುಪುತ್ತಲೇ ಇರಲಿಲ್ಲ. ಕೇವಲ ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳೊಳಗೇ ಹಂಚಿ ಹೋಗುತ್ತಿತ್ತು!'

***

ಕ್ರಾಂತಿಕಾರಿ ಯುವಕಮಂಡಳದ ಸೂಚನಾಫಲಕದಲ್ಲಿ ಬರೆದಿದ್ದ ದಿನಸೂಕ್ತಿ: 'ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಚಿಕ್ಕಪುಟ್ಟ ವ್ಯವಹಾರ ಆರಂಭಿಸಿದರೇನೇ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಂತರ ಉದ್ಯೋಗ ಲಭಿಸುವುದು!'

***

ಟೀಚರ್: ಸ್ವರ ಮತ್ತು ವ್ಯಂಜನಕ್ಕಿರುವ ವ್ಯತ್ಯಾಸಗಳೇನು?

ಮರಿ ಗುಂಡ: ಸ್ವರ ಬಾಯಿಯಿಂದ ಹೊರಗೆ ಹೊರಡುತ್ತದೆ. ವ್ಯಂಜನ ಬಾಯಿಯ ಒಳಗೆ ಹೋಗುತ್ತದೆ ಟೀಚರ್!

***

ಹೀಗೊಂದು ಪ್ರೇಮಿಗಳ ದೂರವಾಣಿ ಸಂಭಾಷಣೆ..

ಹುಡುಗಿ: ಹೇಗಿರುವೆ.

ಹುಡುಗ: ಕಂಗಳಲ್ಲಿ ಏನೋ ಚುಚ್ಚುವಿಕೆ, ಎದೆಯಲ್ಲಿ ಅದೇಕೋ ಉರಿಯುವಿಕೆ, ಶ್ವಾಸದಲ್ಲಿ ಭಾರವಾಗುವಿಕೆಯ ಅನುಭವವಾಗುತ್ತಿದೆ ಡಾರ್ಲಿಂಗ್. ನಾಲ್ಕೂ ದಿಕ್ಕುಗಳಲ್ಲಿ ಮೇಘಮಾಲೆಯ ದಟ್ಟಹೊಗೆ ಕವಿದಂತೆ ಭಾಸವಾಗುತ್ತಿದೆ..

ಹುಡುಗಿ: ಓಹೋ, ಪ್ರೀತಿಯಲ್ಲಿರುವಂತಿದೆ.

ಹುಡುಗ: ಇಲ್ಲ ಕಣೆ, ಬೆಂಗಳೂರು ನಗರದ ಟ್ರಾಫಿಕ್ ಜಾಮ್ ನಲ್ಲಿ ಸಿಲುಕಿಕೊಂಡಿದ್ದೇನೆ!

***

ಚಂಡ ಮಾರುತ ಪಶ್ಚಿಮ ಕರಾವಳಿಯನ್ನು ಅಪ್ಪಳಿಸಿದಾಗ ಊರಿಂದ ಅತ್ತೆ, ಮುಂಬೈ ನೆಲೆಸಿದ್ದ ಮಗಳಿಗೆ ಫೋನಾಯಿಸಿದಳು. ಅಳಿಯ ಫೋನೆತ್ತಿದ.

ಅತ್ತೆ: ಮುಂಬೈಯಲ್ಲಿ ಚಂಡಮಾರುತ ಹೇಗಿದೆ?

ಅಳಿಯ: ಈಗ ತಾನೆ ಊಟ ಮಾಡಿ ಮಲಗಿದೆ, ಎಬ್ಬಿಸಲೆ?

***

ವಿವಾಹಿತ ಪುರುಷರ ಮಂಡಳಿಯ ಅಧ್ಯಕ್ಷ ಗುಂಡಣ್ಣನವರ ಪ್ರಕಾರ, ಕೋವಿಡ್‌ನ ಮೊದಲ ಅಲೆಯ ಲಾಕ್ ಡೌನಿನಲ್ಲಿ ಪುರುಷರು

ಅಡುಗೆ ಮಾಡುವುದನ್ನು ಕಲಿತರು. ಎರಡನೇ ಅಲೆಯ ಲಾಕ್ ಡೌನಿನಲ್ಲಿ ಪುರುಷರು ಮನೆಗುಡಿಸುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದನ್ನೂ ಕಲಿತರು. ಇನ್ನು ಮೂರನೇ ಅಲೆಯಲ್ಲಿ ವರುಷ ಪೂರ್ತಿಗೆ ಬೇಕಾಗುವಷ್ಟು ಉಪ್ಪಿನ ಕಾಯಿ, ಹಪ್ಪಳ, ಸಂಡಿಗೆ ಮಾಡುವುದನ್ನು ಕಲಿತು ಬಿಟ್ಟರೆ ಪುರುಷರ ಮನೆವಾರ್ತೆಯ ಕೋರ್ಸ್ ಸಂಪೂರ್ಣ ಗೊಂಡಂತಾಗುವುದು!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ